# 65

# ನಾನು, ಇನ್ನೂ ಸಹ ಹೊಂದಿರುವ ಕೊರತೆಗಳೇನು?

## ಮಾರ್ಕ 10:17-27; ಮತ್ತಾಯ 19:16-26; ಲೂಕ 18:18-27, ಒಂದು ನಿಕಟ ನೋಟ

ದೇಹದ ಒಳಗಿನ ಭಾಗಗಳನ್ನು ಪರಿಶೀಲಿಸಲು, ವಿಧವಿಧವಾದ ವೈದಕೀಯ ಉಪಕರಣಗಳಿವೆ: ಉದಾಹರಣೆ ಎಕ್ಸ್‌ರೇಮಶಿನ್ಸ್, ಇನ್ನು ಅನೇಕ ವಿಧಗಳಿವೆ. ಒಬ್ಬನು, ಇನ್ನೊಬ್ಬ ಮನುಷ್ಯನ ಬುದ್ಧಿ ಶಕ್ತಿಯನ್ನು ಪರಿಶೀಲಿಸುವ ಉಪಕರಣವನ್ನು ಹೊಂದಿದ್ದರೆ, ಆ ಮನುಷ್ಯನು ತನ್ನ ಆಲೋಚನೆಯಲ್ಲಿ ಏನೆಂದು ಯೋಚಿಸುತ್ತಿರಬಹುದು? ಯೇಸು ಸಹ ಮನುಷ್ಯನ ಅಂತರಾಳವನ್ನು ಗ್ರಹಿಸುವವನಾಗಿದ್ದಾನೆ. ಅದಕ್ಕೆ ಉದಾಹರಣೆಯಾಗಿ ಮಾರ್ಕ 10:17-22ನ್ನು ಗಮನಿಸಿ:

> ಆತನು ಹೊರಟು ದಾರಿ ಹಿಡಿದು ಹೋಗುವಾಗ ಒಬ್ಬನು ಓಡುತ್ತಾ ಆತನ ಎದುರಿಗೆ ಬಂದು ಮೊಣಕಾಲೂರಿ - ಒಳ್ಳೇ ಬೋಧಕನೇ ನಾನು ನಿತ್ಯಜೀವಕ್ಕೆ ಬಾಧ್ಯಸ್ಥನಾಗಬೇಕಾದರೆ ಏನು ಮಾಡಬೇಕೆಂದು ಆತನನ್ನು ಕೇಳಲಾಗಿ ಯೇಸು ಅವನಿಗೆ - ನನ್ನನ್ನು ಒಳ್ಳೆಯವನೆಂದು ಯಾಕೆ ಹೇಳುತ್ತೀ? ದೇವರೊಬ್ಬನೇ ಹೊರತು ಮತ್ತಾವನೂ ಒಳ್ಳೆ ಯವನಲ್ಲ. ನರಹತ್ಯ ಮಾಡಬಾರದು; ವ್ಯಭಿಚಾರಮಾಡಬಾರದು; ಕದಿಯಬಾರದು; ಸುಳ್ಳು ಸಾಕ್ಷಿ ಹೇಳಬಾರದು; ಮೋಸಮಾಡಬಾರದು; ನಿನ್ನ ತಂದೆತಾಯಿಗಳನ್ನು ಸನ್ಮಾನಿಸಬೇಕು ಎಂಬ ದೇವರಾಜ್ಞೆಗಳು ನಿನಗೆ ಗೊತ್ತಿವೆಯಷ್ಟೆ ಎಂದು ಹೇಳಿದನು. ಅವನು ಆತನಿಗೆ - ಬೋಧಕನೋ, ನಾನು ಚಿಕ್ಕಂದಿನಿಂದಲೂ ಇವೆಲ್ಲಕ್ಕೂ ಸರಿಯಾಗಿ ನಡಕೊಂಡು ಬಂದಿದ್ದೇನೆ ಎಂದು ಹೇಳಲು ಯೇಸು ಅವನನ್ನು ದೃಷ್ಟಿಸಿ ನೋಡಿ ಪ್ರೀತಿಸಿ ಅವನಿಗೆ - ನಿನಗೆ ಒಂದು ಕಡಿಮೆಯಾಗಿದೆ; ಹೋಗು, ನಿನ್ನ ಬದುಕನ್ನೆಲ್ಲಾ ಮಾರಿ ಬಡವರಿಗೆ ಕೊಡು; ಪರಲೋಕದಲ್ಲಿ ನಿನಗೆ ಸಂಪತ್ತಿರುವದು; ನೀನು ಬಂದು ನನ್ನನ್ನು ಹಿಂಬಾಲಿಸು ಎಂದು ಹೇಳಿದನು. ಆದರೆ ಅವನು ಬಳ ಆಸ್ತಿಯುಳ್ಳವನಾಗಿದ್ದರಿಂದ ಈ ಮಾತಿಗೆ ಮೋರೆ ಬಾಡಿದವನಾಗಿ ದುಃಖದಿಂದ ಹೊರಟು ಹೋದನು.

### ಆ ಯೌವನಸ್ಥನಲ್ಲಿದ್ದ ಕೊರತೆ ಏನು?

ಕೆಲವರನ್ನು ಮೊದಲ ಸಲವೇ ಇಷ್ಟ ಪಡುತ್ತೇವೆ, ಉಳಿದವರನ್ನು ಅರಿಯಲು ಅನೇಕ ದಿನಗಳ ಕಾಲ ತೆಗೆದುಕೊಳ್ಳುತ್ತೇವೆ. ಯೇಸುವಿನ ಬಳಿಗೆ ಬಂದ ಯೌವನಸ್ಥನನ್ನು ಕೆಲವೇ ಕ್ಷಣಗಳಲ್ಲಿ ಗ್ರಹಿಸಬಹುದಾಗಿತ್ತು. ಅವನಲ್ಲಿ ಮೆಚ್ಚುವಂಥ ಅನೇಕ ಸದ್ಗುಣಗಳಿದ್ದವು.

(1) ಅವನ ಸರಿಯಾದ ಮಾರ್ಗಕ್ಕೆ ಬಂದಿದ್ದನು: ಅವನು ಯೇಸುವನ್ನು ಸಂಧಿಸಿದನು. ನಾವುಗಳು ಜನರಿಗೆ ಅಗತ್ಯವಿರುವ ಸಂಗತಿಗಳನ್ನು ಅರಿತು ಅಂಥವುಗಳನ್ನು ನೆರವೇರಿಸಲು ಯತ್ನಿಸುತ್ತೇವೆ. ನಂತರ ಆ ಮನುಷ್ಯನು ಯೇಸುವಿನ ಮುಂದೆ ಮೊಣಕಾಲೂರಿದನು. ಅವನು ಅಧಿಕಾರಕ್ಕೆ ಗೌರವ ಸಲ್ಲಿಸದ ಹೆಮ್ಮೆಯ ವ್ಯಕ್ತಿಯಾಗಿರಲಿಲ್ಲ.

(2) ಅವನು ಸದ್ದುದ್ದೇಶದಿಂದ ಬಂದನು: ಸಾಮಾನ್ಯವಾಗಿ ಜನರು ತಾತ್ಕಾಲಿಕವಾದ ಜೀವನದ ಬಗ್ಗೆ ಚಿಂತಿಸುವವರಾದರೆ, ಈ ಮನುಷ್ಯನು - ನಿತ್ಯ ಜೀವದ

ಬಗ್ಗೆ ಪ್ರಶ್ನೆ ಹೊಂದಿದ್ದನು.

(3) ಅವನು ಸರಿಯಾದ ಸ್ಥಳಕ್ಕೆ ಬಂದಿದ್ದನು: ಅವನು ಜನರ ಮಾತುಗಳಿಗೆ ಕಿವಿಗೊಡದೆ ಅಥವಾ ಧಾರ್ಮಿಕ ಅಧಿಕಾರಿಗಳ ಬೋಧನೆಗಳಿಗೂ ಕಿವಿಗೊಡಲಿಲ್ಲ, ಆದರೆ ಉತ್ತರಕ್ಕಾಗಿ ಯೇಸುವಿನ ಒಳಗೆ ಬಂದನು.

(4) ಅವನು ಸರಿಯಾದ ಸಮಯಕ್ಕೆ ಬಂದನು. ಅವನು ಯೌವ್ವನ ಕಾಲದಲ್ಲಿ ಬಂದಿದ್ದನು. "ಕಷ್ಟದ ದಿನಗಳೂ ಸಂತೋಷವಿಲ್ಲವೆಂದು ನೀನು ಹೇಳುವ ವರುಷಗಳೂ ಸಮೀಪಿಸುವದರೊಳಗಾಗಿ ಯೌವನದಲ್ಲಿಯೇ ನಿನ್ನ ಸೃಷ್ಟಿಕರ್ತನ್ನು ಸ್ಮರಿಸು" (ಪ್ರಸಂಗಿ 12:1).

ಅವನು ಈ ಸದ್ಗುಣಗಳನ್ನ ಹೊಂದಿದ್ದರೂ, ಅವನಲ್ಲಿ ಒಂದು ಕೊರತೆಯಿತು. ಆದ್ದರಿಂದ, "ಒಳ್ಳೆಯ ಬೋಧಕನೇ ನಾನು ನಿತ್ಯಜೀವವನ್ನು ಪಡೆಯಲು ಏನು ಮಾಡಬೇಕು?" ಎಂದು ಕೇಳಿದನು (ಮಾರ್ಕ 10:17).

ನೀವು ಯಾವಾಗಲಾದರೂ ಅಸಂಬದ್ಧವಾದ ಪ್ರಶ್ನೆಯನ್ನು ಕೇಳಿರುವಿರಾ? ಯೇಸುವಿನ ಉತ್ತರವನ್ನು ಗಮನಿಸಿ: "ನನ್ನನ್ನು ಒಳ್ಳೆಯವನೆಂದು ಏಕೆ ಕರೆಯುತ್ತಿ? ದೇವರ ಹೊರತಾಗಿ ಒಳ್ಳೆಯವನಿಲ್ಲ" ಅಂದನು (ಮಾರ್ಕ 10:18).

ಕ್ರಿಸ್ತನ ದೈವತ್ವವನ್ನು ನಿರಾಕರಿಸುವ ಕೆಲವರು, ಈ ವಚನದ ಆಧಾರದಿಂದ, ಯೇಸು ಒಳ್ಳೆಯವನಲ್ಲ ಎಂದು ತಾನೇ ಹೇಳಿದ್ದಾನೆ ಎಂದು ಪ್ರತಿಪಾದಿಸುತ್ತಾರೆ. ಇತರೆ ಸ್ಥಳದಲ್ಲಿ ಯೇಸು ತನ್ನ ದೈವತ್ವದ ಕುರಿತು ತಾನೇ ಪ್ರತಿಪಾದಿಸಿದ್ದಾನೆ. ಉದಾಹರಣೆ ಯೋಹಾನ 14:9ರಲ್ಲಿ, "ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ." ಇಲ್ಲಿ ನಿರಾಕರಣೆಗೆ ಕಾರಣವೇ ಇರುವದಿಲ್ಲ. ಯೇಸುವಿನ ಮಾತುಗಳನ್ನು ಆಳವಾಗಿ ಗಮನಿಸುವದಾದರೆ, ಆತನ ದೈವತ್ವವನ್ನ ನಿರಾಕರಿಸುವ ಬದಲು, ಅದನ್ನು ಪ್ರತಿಪಾದಿಸಬಹುದಾಗಿದೆ. ಅವನು ಯೇಸುವನ್ನು ಮೆಸ್ಸೀಯನೆಂದು ತಿಳಿಯದೆ, ಕೇವಲ "ಒಳ್ಳೆಯ *ಬೋಧಕನೇ"* ಎಂದು ಕರೆದನು. "ಒಳ್ಳೆಯ" ಎಂಬ ಅಂಶವನ್ನು ಮನುಷ್ಯನಿಗೆ ಬಳಸುವದಾದರೆ, ಅವನು ದೇವರೇ ಆಗಿರಬೇಕು - ಆದರೆ ದೇವರು ಮಾತ್ರ ಒಳ್ಳೆಯವನಾಗಿದ್ದಾನೆ.

ಕರ್ತನ ಮಾತು ಇಬ್ಬಾಯಿ ಕತ್ತಿಯಂತಿದೆ. ಯೇಸುವಿನ ದೈವತ್ವವನ್ನು ನಿರಾಕರಿಸಿ ಆತನು ಕೇವಲ ಒಳ್ಳೆಯವನು ಎಂದು ಹೇಳುವವರನ್ನು ತೋರಿಸಿಕೊಡುತ್ತದೆ. ಅತನು ಒಳ್ಳೆಯವನಾಗಿದ್ದರೆ, ಆತನು ದೇವರೆ ಹಾಗೂ ತಮ್ಮ ಉತತನ ನಡವಳಿಕೆಯಿಂದ ರಕ್ಷಣೆ ಹೊಂದಬಹುದು ಎಂದು ಭಾವಿಸುವವರನ್ನು ಸೂಚಿಸುತ್ತದೆ. ದೇವರ ಹೊರತಾಗಿ ಯಾರೂ ಒಳ್ಳೆಯವರಲ್ಲ.

ತನ್ನ ದೈವತ್ವವನ್ನು ಸ್ಪಷ್ಟಪಡಿಸಿ ನಂತರ, ಕ್ರಿಸ್ತನು ಅವನ ಪ್ರಶ್ನೆಗೆ ಉತ್ತರಿಸಿದನು: "ಹೌದು ನೀನು ದೇವರಾಜ್ಞೆಗಳನ್ನು ಬಲ್ಲವನಾಗಿದ್ದೀ, ನರಹತ್ಯಮಾಡಬಾರದು, ವ್ಯಭಿಚಾರಮಾಡಬಾರದು, ಕದಿಯಬಾರದು, ಸುಳ್ಳುಸಾಕ್ಷಿ ಹೇಳಬಾರದು, ಮೋಸಮಾಡಬಾರದು, ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸಬೇಕು." ಆ ಯಾವನಸ್ಥನು ಒಂದು ಸಾಮಾನ್ಯ ತಪ್ಪನ್ನು ಮಾಡಿ, ಕ್ರಿಸ್ತನು ದೇವರು ನೀಡಿದ ಮೂಲ ಆಜ್ಞೆಗಳ ಅರಿವನ್ನು ಹೊಂದಿರುವದಿಲ್ಲ ಎಂದು ತಿಳಿದನು. ಕೆಲವರು ಹೊಸ ಒಡಂಬಡಿಕೆಯು ತಮ್ಮ ಅಗತ್ಯಕ್ಕೆ ಸರಳವಾದದ್ದಾಗಿರುವದರಿಂದ, ಅಧಿಕ ಅಗತ್ಯತೆಯನ್ನು ಬಯಸುತ್ತಾರೆ. (2 ತಿಮೋಥೆ 4:3, 4). ಆದರೆ ಮನುಷ್ಯನಿಗೆ, "ದೇವರು ಇಚ್ಚಿಸುವ ಒಂದು ಸಂಗತಿಯನ್ನು ತಿಳಿಸಿದನು. ಮತ್ತಾಯನ ಪ್ರಕಾರ, ನಿತ್ಯಜೀವ ಹೊಂದಲು, ಆಜ್ಞೆಗಳನ್ನು ಪಾಲಿಸು" (ಮತ್ತಾಯ 19:17ಬಿ).

"ಧರ್ಮ"ವನ್ನು ಬಯಸದ ಜನರು ಇದ್ದಾರೆ. ಅವರೂ ರೋಮಾಪುರ 4:5, ಪ್ರಕಾರದ ಜನರು ಅವರಾಗಿದ್ದಾರೆ. (ಕೆಲಸಮಾಡದವರು). ಅಂದರೆ ಕೆಲಸ ಮಾಡುವ ಅಗತ್ಯವೇ ಇಲ್ಲ ಎನ್ನುವವರು.[2] ನಿತ್ಯಜೀವ ಪಡೆಯಲು, ಆಜ್ಞೆಗಳ ಪಾಲನೆ ಅಗತ್ಯ ಎಂದು ಯೇಸು ಹೇಳಿದನು.

ಕ್ರಿಸ್ತನ ಮರಣದ ಮೊದಲು ಆಜ್ಞೆಗಳು ಧರ್ಮಶಾಸ್ತ್ರದ ಹಳೇ ನಿಯಮಗಳಾಗಿದ್ದವು.[3] ಆದ್ದರಿಂದ ಯೇಸು ದಶಾಜ್ಞೆಗಳಲ್ಲಿರುವದನ್ನೇ ಹೇಳಿದನು. ಈ ದಿನಗಳಲ್ಲಿ, ನಾವು ಕ್ರಿಸ್ತನ ಆಜ್ಞೆಗಳಿಗೆ ಒಳಗಾಗಿದ್ದೇವೆ, "ನೀವು ನನ್ನನ್ನು ಪ್ರೀತಿಸುವವರಾದರೆ ನನ್ನ ಆಜ್ಞೆಗಳನ್ನು ಕೈ ಕೊಂಡು ನಡೆಯುವಿರಿ" (1 ಯೋಹಾನ 5:3ಎ).

ಆ ಅಪ್ಪಣೆಗಳೇನು? ಅವುಗಳಲ್ಲಿ ಕೆಲವನ್ನು ನಿಮಗೆ ತಿಳಿಸುತ್ತೇನೆ:[4] "ಆದದರಿಂದ ನೀವು ನಿಮ್ಮ ಪಾಪಗಳಲ್ಲಿಯೇ ಸಾಯುವಿರೆಂದು ನಿಮಗೆ ಹೇಳಿದೆನು; ನನ್ನನ್ನು ಆತನೆಂದು ನೀವು ನಂಬದೆ ಹೋದರೆ ನಿಮ್ಮ ಪಾಪಗಳಲ್ಲಿಯೇ ಸಾಯುವಿರೆಂದು ಹೇಳಿದನು"; "ಹಾಗೆ ಭಾವಿಸಕೂಡದೆಂದು ನಿಮಗೆ ಹೇಳುತ್ತೇನೆ. ದೇವರ ಕಡೆಗೆ ತಿರಗಿಕೊಳ್ಳದಿದ್ದರೆ ನೀವೆಲ್ಲರೂ ಹಾಗೆಯೇ ಹಾಳಾಗಿ ಹೋಗುವಿರಿ"; "ಹಾಗಾದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನೆಂದು ಒಪ್ಪಿಕೊಳ್ಳುವನೋ" (ಯೋಹಾನ 8:24; ಲೂಕ 13:3; ಮತ್ತಾಯ 10:32; ಮಾರ್ಕ 16:16). "ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು" (ಮತ್ತಾಯ 10:22).

ನಿತ್ಯಜೀವವನ್ನು ಹೊಂದಲು ಮನುಷ್ಯರನ್ನು ಅವಲಂಭಸದೆ ದೇವರ ವಾಕ್ಯದ ಕಡೆಗೆ ಬನ್ನಿರಿ. ದೇವರ ಕೃಪೆ ಹಾಗೂ ಕರುಣೆಯನ್ನು ಹೊಂದಲು ಅಪೇಕ್ಷಿಸಬೇಕು.

ಯೌವನಸ್ಥನು ಆಜ್ಞೆಯನ್ನು ಪಾಲಿಸಬೇಕು ಎಂಬ ಮಾತನ್ನು ಕೇಳಿದಾಗಲೂ ಅವನು ತೃಪ್ತನಾಗಲಿಲ್ಲ. ಅದಕ್ಕವನು, ಬಾಲ್ಯದಿಂದಲೂ ನಾನು ಇದನ್ನೇಲ್ಲಾ ಕಾಪಾಡಿಕೊಂಡಿದ್ದೇನೆ. "ನಮ್ಮಲ್ಲಿ ಅನೇಕರು ಈ ವಿಧದ ಉತ್ತರವನ್ನು ನೀಡದೆ ಇರಬಹುದು." ನಾವು ಯಾವಾಗಲೂ ಸರಿಯಾದದ್ದನ್ನು ಮಾಡುವದಿಲ್ಲ.

ಯೌವನದಲ್ಲಿ ಸರಿಯಾದ ಕಾರ್ಯವನ್ನು ಆರಂಭಮಾಡದೆ ಇರಬಹುದು. ಯೌವನಸ್ಥರು ದೇವರ ಚಿತ್ತವನ್ನು ನೆರವೇರಿಸುವದು, ಆಸಕ್ತಿಕರವಾಗಿದೆ. ಆ ಸಂದರ್ಭದಲ್ಲಿ, ಆ ಮನುಷ್ಯನು "ನನ್ನಲ್ಲಿರುವ ಕೊರತೆಯೇನು" (ಮತ್ತಾಯ 19:20). ಪ್ರಕಾರ, "ಯಾವ ಕೊರತೆಯನ್ನು ನಾನು ಇನ್ನು ಸಹ ಹೊಂದಿದ್ದೇನೆ" ನಮ್ಮನ್ನು ಪರಿಶೀಲನೆಗೆ ಒಳಪಡಿಸಿಕೊಳ್ಳುವಂಥ ಪ್ರಶ್ನೆಯನ್ನು ಕೇಳಬೇಕು.

ಅವನಲ್ಲಿದ್ದ ಕೊರತೆ ಏನೆಂದು ಅವನು ಕೇಳಿದಾಗ, "ಯೇಸು ಅವನನ್ನು ನೋಡಿ ಪ್ರೀತಿಸಿದನು" (ಮಾರ್ಕ 10:21; KJV) ಕರ್ತನು ಮನುಷ್ಯರ ಹೃದಯವನ್ನು ನೋಡುತ್ತಾನೆ ಎಂದು ಪಾಠದ ಆದಿಯಲ್ಲಿ ತಿಳಿಸಿದ್ದೇನೆ. ಯೇಸು ಅವನನ್ನು ನೋಡಿದಾಗ ಅವನಲ್ಲಿ ಗಮನಾರ್ಹವಾದ ಸಂಗತಿಗಳಿದ್ದವು. ಅವನಲ್ಲಿದ್ದವೆಲ್ಲವೂ ಒಳ್ಳೆಯದಲ್ಲದಿದ್ದರೂ, ಅವನ ಸಾಮರ್ಥ್ಯವನ್ನು ನೋಡಿ ಯೇಸು ಅವನನ್ನು ಪ್ರೀತಿಸಿದನು.

ನೀವು ಯಾರನ್ನಾದರೂ ಪ್ರೀತಿಸಿದರೆ, ನಿಮ್ಮ ಸಲಹೆಯ ಮಾತುಗಳು ಅವರ ಮನಸ್ಸಿಗೆ ನೋವನ್ನು ಉಂಟು ಮಾಡಿದಾಗ್ಯೂ, ಅದ ಅವರ ಒಳತಿಗಾಗಿ ಎಂದು ಅರ್ಥಮಾಡಿಕೊಂಡಿರುವಿರಾ? ಅದನ್ನೆ ಯೇಸು ಹೇಳಿದನು. ಅವನ ಸಮಸ್ಯೆಯನ್ನು ಅರಿತ ಸ್ವಾಮಿ - ಅವನನ್ನು ಪ್ರೀತಿಸಿದರಿಂದ,[5] ಅವನಿಗೆ, ನಿನ್ನ ಆಸ್ತಿಯನ್ನು ಮರಿ ಬಡವರಿಗೆ ಕಡು; ಪರಲೋಕದಲ್ಲಿ ನಿನಗೆ ಸಂಪತ್ತಿವದು, ನೀನು ಬಂದು ನನ್ನನ್ನು ಹಿಂಬಾಲಿಸು ಎಂದು ಹೇಳಿದನು.

ಕರ್ತನ ಆಲೋಚನೆಯನ್ನು ಪರಿಗ್ರಹಿಸಲು, ಎರಡು ಅಂಶಗಳನ್ನು ಗಮನಿಸಿ. ಕರ್ತನು ಆ ಯೌವನಸ್ಥನಿಗಾಗಿ ಒಂದು ಪ್ರಮುಖ ಕಾರ್ಯವನ್ನು ನಿಗದಿಪಡಿಸಿದ್ದನು. "ಅವನು ಶಿಷ್ಯನಾಗಬೇಕೆಂದಿದ್ದರೂ, ಎಲ್ಲವನ್ನು ಬಿಟ್ಟು ನನ್ನನ್ನು ಹಿಂಬಾಲಿಸು" (ಮತ್ತಾಯ 4:18-22; ಲೂಕ 5:1, 27, 28).

ಕರ್ತನನ್ನು ಹಿಂಬಾಲಿಸಬೇಕೆಂದಿದ್ದ ಶಿಷ್ಯರು "ಪರಿಪೂರ್ಣ ಸಮರ್ಪಣೆಯನ್ನು

ಹೊಂದಿರಬೇಕು'' ದೇವರು ತನ್ನ ಗೌರವವನ್ನು ಇತರರಿಗೆ ನೀಡುವದಿಲ್ಲ'' ಇಬ್ಬಗೆಯ ಪ್ರೀತಿನ್ನು ಬಯಸುವದಿಲ್ಲ. ಕ್ರಿಸ್ತನ ಶಿಷ್ಯನಾಗಬೇಕೆಂದರೆ ಎಲ್ಲವನ್ನು ತ್ಯಾಗಮಾಡಬೇಕು ಎಂದು ಯೌವನಸ್ಥನು ತಿಳಿದನು.

ಪೂರ್ಣ ಸಮರ್ಪಣೆಯ ಹಾಗೂ ತನ್ನ ನಡುವೆ ಹಣವು ಅಡ್ಡಿಯಾದ್ದರಿಂದ, ಯೇಸು ಅವನಿಗೆ ಅದನ್ನು ಬಿಟ್ಟು ಬಾ ಅಂದನು. ಪರಿಪೂರ್ಣ ಸಮರ್ಪಣೆಗೆ ಅಡ್ಡಿಯಾಗುವ ಯಾವುದೇ ಸಂಗತಿಗಳು ನಮ್ಮಲ್ಲಿ ಇರಬಾರದು. ಅದರಲ್ಲಿ ಹಣವೂ ಒಂದು. ಅದು ವ್ಯಯಕ್ತಿಕ ಆಸೆ, ವ್ಯಯಕ್ತಿಕ ತಪ್ಪು, ಅಥವಾ ಬೇಡವಾದ ಸ್ನೇಹಿತರೂ ಆಗಿರಬಹುದು. ನಮ್ಮ ಪ್ರೀತಿ ಹಾಗೂ ವಿವೇಚನೆಗಳಲ್ಲಿ ತನಗೆ ಪ್ರಥಮ ಸ್ಥಾನ ನೀಡಬೇಕೆಂದು ಕರ್ತನು ಬಯಸುತ್ತಾನೆ.

ದುಃಖದಿಂದ ಅಂತ್ಯಗೊಳ್ಳುವ ಕಥೆಗಳನ್ನು ನೀವುಗಳು ಇಷ್ಟಪಡದೆ ಇದ್ದರೆ, ಅದರಲ್ಲಿ ಈ ಕಥೆಯೂ ಸಹ ಒಂದಾಗಿರುತ್ತದೆ. "ಯೇಸು ಆ ಯೌವನಸ್ಥನ ಆಧ್ಯತೆಯನ್ನು ಪರೀಕ್ಷಿಸಿದಾಗ - ಆ ಪರೀಕ್ಷೆಯಲ್ಲಿ ಅವನು ಅನುತ್ತೀರ್ಣನಾದ ಆ ಯೌವನಸ್ಥನು ಬಹಳ ಆಸ್ತಿವುಳ್ಳವನಾಗಿದ್ದದರಿಂದ ಈ ಮಾತನ್ನು ಕೇಳಿ ದುಃಖದಿಂದ ಹೊರಟುಹೋದನು.''

ಅವನು ದುಃಖವುಳ್ಳವನಾದನು. ಈ ದಿನಗಳಲ್ಲಿ ಕೆಲವು ಜನರು ಮಾಡುವಂಥೆ ಅವನು ಕ್ರಿಸ್ತನನ್ನು ಪೂರ್ಣ ನಿರಾಕರಿಸಲಿಲ್ಲ.[6] ಅವನು ಕ್ರಿಸ್ತನನ್ನು ಹಾಗೂ ಹಣವನ್ನೂ ಪ್ರೀತಿಸಿದ್ದರಿಂದ - ಅವರ ನಡುವೆ ಒಂದನ್ನು ಆಯ್ಕೆ ಮಾಡಿಕೊಳ್ಳುವದು ಕಷ್ಟವಾಯಿತು. ಅವೆರಡನ್ನುಬಿಡದೆ ಇದದ್ದಕ್ಕಾಗಿ ಅವನು ಯೇಸುವನ್ನು ನಿರಾಕರಿಸಿದ್ದಕ್ಕಾಗಿ, ದುಃಖಪಟ್ಟನು. ಈ ಅಂಶವನ್ನು ಆಲೋಚಿಸಿರಿ: ಅವನು ಕ್ರಿಸ್ತನನ್ನು ಪ್ರೀತಿಸಿದನು; ಅದಕ್ಕಿಂತಲೂ ಹೆಚ್ಚಾಗಿ ತನ್ನ ಹಣವನ್ನು ಪ್ರೀತಿಸಿದನು. ನೀವು ಯಾವದನ್ನು ಪ್ರೀತಿಸುವಿರ ಎಂಬುದರ ಕಡೆಗೆ ಗಮನವಿರಲಿ.

"ಅವನು ದುಃಖದಿಂದ ಹಿಂದಿರುಗಿದನು'' - ಅವನು ಗೌರವನೀಡದೆ ಒರಟು ಸ್ವಭಾವ ಹೊಂದಿದವನಾಗಿ ಹೋದನ. ಅವನು ತಪ್ಪಾದ ನಿರ್ಣಯನ್ನು ಮಾಡಿ, ತಾನು ಆಶಿಸಿದ ನಿತ್ಯಜೀವವನ್ನು ಕಳಕೊಂಡನು.

ಒಂದು ಪ್ರಶ್ನೆ ಕೇಳಲು ಬಯಸುತ್ತೇನೆ: ಯೇಸು ಒಬ್ಬನನ್ನು ಪ್ರೀತಿಸಿದಾಗ್ಯೂ ಆ ಮನುಷ್ಯನು ನಾಶವಾಗುವ ಸಾಧ್ಯತೆ ಇದೆಯೇ? ಕ್ರಿಸ್ತನು ಇವನನ್ನು ಪ್ರೀತಿಸಿದಾಗ್ಯೂ, ಅವನು ನಾಶವಾದನು. ಕರ್ತನ ಪ್ರೀತಿ ಮಾತ್ರ ಸಾಲದು (ರೋಮಾಪುರ 5:8). ನಿನ್ನನ್ನು ಅದಕ್ಕೆ ಸಮರ್ಪಿಸಿಕೊಳ್ಳುವ ಮೂಲಕ, ಆ ಪ್ರೀತಿಯನ್ನು ಹಿಂದಿರುಗಿಸಬಹುದು (ಯೋಹಾನ 14:15).

## ನಿನ್ನ ಜೀವಿತದಲ್ಲಿರುವ ಕೊರತೆಯೇನು?

ಯೌವನಸ್ಥನ ಕಥೆಯು ದುಃಖದ ಅಂತ್ಯ ಕಂಡರೂ, ಅದನ್ನು ಸಂತೋಷದ ಅಂತ್ಯವನ್ನಾಗಿ ಕಾಣಬಹುದಾಗಿದೆ: ಆ ಮನುಷ್ಯನು ಕೇಳಿದ ಪ್ರಶ್ನೆಯನ್ನು ಕೇಳಿರಿ ಮತ್ತು ಕರ್ತನು ಹೇಳಿದ್ದನ್ನೇ ಮಾಡಿರಿ. "ನನ್ನಲ್ಲಿ ಯಾವ ಕೊರತೆಯಿದೆ?'' ಎಂದು ಕೇಳಿರಿ. ಕೆಲವು ಕ್ಷಣಗಳ ಹಿಂದೆ, ಯೇಸು ನೀಡಿದ ಆಜ್ಞೆಗಳನ್ನು ನೋಡಿದ್ದೇವೆ. ನಂಬಿಕೆ ಇಲ್ಲದಿದ್ದರೆ? ಮಾನಸಾಂತರ ಇಲ್ಲದಿದ್ದರೆ? ಅರಿಕೆ ಇದೆಯೋ? ದೀಕ್ಷಾಸ್ನಾನ ಹೊಂದಿಲ್ಲವೇ? ಸಮರ್ಪಣೆಯ ಕ್ರೈಸ್ತ ಜೀವಿತವನ್ನು ಹೊಂದಿಲ್ಲವೇ? ಕ್ರಿಸ್ತನು ಪ್ರಶ್ನೆ ಕೇಳಿದವನಿಗೆ "ನಿನ್ನಲ್ಲಿ ಒಂದು ಕೊರತೆಯಿದೆ; ದೇವರು ಮೆಚ್ಚುವ ಒಂದು ಸಂಗತಿ ಇರುವದಿಲ್ಲ?'' ಮಾರ್ಗ ಸೂಚಿ ಇಲ್ಲದ ಹಡಗು - ಅಸಮರ್ಥವಾಗಿದೆ.

ದೇವರ ಕಟ್ಟಳೆಗಳನ್ನು ಪಾಲಿಸದೆ ಇದ್ದರೆ, ನಾಶನ ಉಂಟಾಗುತ್ತದೆ. "ನೀವು ನಂಬದಿದ್ದರೆ, ನಿಮಮ ಪಾಪದಲ್ಲೇ ಸಾಯುವಿರಿ ಎಂದು'' ಯೇಸು ಹೇಳಿರುವನು; ಮಾನಸಾಂತರ ಪಡದಿದ್ದರೆ, ನಾಶವಾಗುವಿರಿ, ನನ್ನ ತಂದೆಯ ಮುಂದೆ ನಿಮ್ಮನ್ನು ನಾನು ಅರಿಯನೆಂದು ಹೇಳುವೆನು. ಒಬ್ಬನು ನೀರಿನಿಂದಲೂ, ಆತ್ಮದಿಂದಲೂ ಹುಟ್ಟದಿದ್ದರೆ, ದೇವರ

ರಾಜ್ಯವನ್ನು ಸೇರಲಾರನು (ಯೋಹಾನ 8:24; ಲೂಕ 13:3; ಮತ್ತಾಯ 10:33; ಯೋಹಾನ 3:5). ಇಬ್ರಿಯ ಬರಗಾರನು, ಕ್ರೈಸ್ತರಿಗೆ ಬರೆದು: "ಈ ಅತ್ಯಂತ ವಿಶೇಷ ರಕ್ಷಣೆಯನ್ನು ಅಲಕ್ಷ ಮಾಡಿದರೆ, ತಪ್ಪಿಸಿಕೊಳ್ಳುವದು ಹೇಗೆ?" (ಇಬ್ರಿಯ 2:3). ನಿಮ್ಮ ಕೊರತೆಯೇನು ಎಂದು ಕರ್ತನು ಅರಿತಿರುವಂತೆ, ನೀವು ಸಹ ಅರಿತಿರುವಿರಾ.

ಈ ಅಂಶವನ್ನು ಗಮನಿಸಿ: ಕ್ರಿಸ್ತನ ಮಾತಿಗನುಗುಣವಾಗಿ, ಆ ಯೌವನಸ್ಥನು ಸ್ಪಂಧಿಸಿದ್ದರೆ, ಅವನು ಏನನ್ನು ಕಳಕೊಳ್ಳುತ್ತಿರಲಿಲ್ಲ. ನಾಲ್ವತ್ತು ವರ್ಷಗಳ ಅಂತರದಲ್ಲಿ ರೋಮಾಯರು ಬಂದು ಈ ಪಟ್ಟಣವನ್ನು ನಾಶಮಾಡಿ ಜನರ ಸತ್ತುಗಳನ್ನು ದೋಚಿಕೊಂಡರು. ಅಂತ್ಯದಲ್ಲಿ, ಆ ಯೌವನಸ್ಥನು, "ಪರಲೋಕದ ಸಂಪತ್ತನ್ನು ಮಾತ್ರವಲ್ಲದೆ, ತಾನು ಪ್ರೀತಿಸಿದ್ದನ್ನು ಸಹ ಕಳಕೊಂಡನು." ದೇವರಿಗೆ ಒಳಗಾದರೆ, ನೀವು ಏನನ್ನು ಕಳಕೊಳ್ಳುವದಿಲ್ಲ (ಫಿಲಿಪ್ಪಿ 3:7, 8). ಈ ಲೋಕದಲ್ಲಿ ಸಂತೋಷದ ಹಾಗೂ ಸಮೃದ್ಧಿಯ ಜೀವಿತವನ್ನು ಹೊಂದುವಿರಿ. ತದನಂತರ, ದೇವರ ಸಂಪತ್ತು ನಿಮಗಾಗಿ ಕಾದಿರುತ್ತದೆ (ಮತ್ತಾಯ 19:29).

ಏನಾದರೂ ಕೊರತೆ ನಿಮ್ಮಲ್ಲಿದ್ದರೆ, ಕರ್ತನ ಬಳಿಗೆ ಬನ್ನಿರಿ - ಈಗಲೇ, ಆತನು ಅದನ್ನು ನಿವಾರಿಸುವನು.

---

ಟಿಪ್ಪಣಿಗಳು

[1]ಸಂದೇಶದ ಪ್ರಮುಖ ಅಂಶ ಮಾರ್ಕ 10ರಲ್ಲಿದ್ದರೂ, ಮತ್ತಾಯ 19, ಹಾಗೂ ಲೂಕ 18ನ್ನು ದಾಖಲಿಸಿದ್ದೇನೆ. [2]ರೋಮಾಪುರ 4:5ರ ಪ್ರಕಾರ, ರಕ್ಷಣೆ; ಸಂಪಾದನೆ ಮಾಡುವದು ಅಸಾಧ್ಯ, ರಕ್ಷಣೆಗೆ ದೇವರಿಗೆ ವಿಧೇಯರಾಗುವದು ಪ್ರಮುಖವಲ್ಲ ಎಂದು ಹೇಳುತ್ತಾರೆ. [3]ಹಳೆ ಒಡಂಬಡಿಕೆಯು ಯೇಸುವಿನ ಮರಣದವರೆಗೂ; ಪ್ರಚಲಿತವಿದ್ದು ನಂತರ ಹೊಸ ಒಡಂಬಡಿಕೆ ಆರಂಭವಾಯಿತು (ನೋಡಿರಿ ಕೊಲಸ್ಸೆ 2:14; ಇಬ್ರಿಯ 9:15-17). [4]ನಿಮ್ಮ ಓದುಗರ ಜೀವನದಲ್ಲಿ ಇರುವ "ಕೊರತೆಯ" ಬಗ್ಗೆ ಈ ಪ್ರಸಂಗವನ್ನು ಹೇಳಬಹುದು. ಕ್ರೈಸ್ತರಾಗುವ ಕುರಿತು ಪ್ರಸಂಗ ಮಾಡಬಹುದು, ಆದರೆ ನಂಬಿಕೆಯುಳ್ಳ ಕ್ರೈಸ್ತನ ಜೀವನದ ಕುರಿತು ಹೇಳಲು ಕೇಂದ್ರೀಕರಿಸಬಹುದು. [5]ಇಬ್ರಿಯ 12:6 ನೋಡಿ. [6]ವಿಧೇಯತೆಯ ಕರೆ ನೀಡಿದ ನಂತರ, ಅಸಡ್ಡೆಯ ಉತ್ತರ ದೊರಕಬಹುದು ಎಂಬುದರ ಉದಾಹರಣೆಯನ್ನು ಕೊಡಿ. [7]"ಕೊರತೆ ಇರುವ ಒಂದು ಅಂಶದ" ಕುರಿತು ನಿಮ್ಮ ಅನುಭವವನ್ನು ಹೇಳಿ.